# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1955
2) ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 16-03-2022
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮೀನುಗಾರಿಕೆ ಇಲಾಖೆಯ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳು ಯಾವುವು; ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರೂಪಿಸಿರುವ ಮಾನದಂಡಗಳೇನು;<br>(ವಿವರ ನೀಡುವುದು) | ಮೀನುಗಾರಿಕೆ ಇಲಾಖೆಯು ಈ ಕೆಳಕಂಡ ನಾಲ್ಕು ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.<br>1. ನೀಲಿಕ್ರಾಂತಿ / ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆ - ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ.<br>2. ಮೀನುಗಾರರ ಕಲ್ಯಾಣ ಯೋಜನೆಗಳು - ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ ಹಾಗೂ ಸಾಮೂಹಿಕ ವಿಮಾ ಯೋಜನೆ.<br>3. ಮೀನುಗಾರಿಕೆ ಬಂದರುಗಳ ನಿರ್ಮಾಣ.<br>4. ಮೀನುಗಾರಿಕೆ ಬಂದರುಗಳ ಹೂಳೆತ್ತುವಿಕೆ.<br>ಸದರಿ ಯೋಜನೆಗಳು ಕೇಂದ್ರ ಪುರಸ್ಕೃತ ಯೋಜನೆಗಳಾಗಿರುವುದರಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ. ಯೋಜನೆಗಳ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಈ ಯೋಜನೆಗಳಿಗಾಗಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರ ದಿಂದ ಬಿಡುಗಡೆಯಾಗಿರುವ ಹಾಗೂ ಖರ್ಚಾಗಿರುವ ಅನುದಾನ ಎಷ್ಟು;<br>(ವರ್ಷವಾರು ವಿವರ ನೀಡುವುದು) | ಈ ಯೋಜನೆಗಳಿಗಾಗಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಹಾಗೂ ಖರ್ಚಾಗಿರುವ ಅನುದಾನದ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಇ) | ದೇಶದ ಇತರ ರಾಜ್ಯಗಳಿಗೆ ಹೋಲಿಸಿದ್ದಲ್ಲಿ ಕೇಂದ್ರ ಸರ್ಕಾರ ದಿಂದ ರಾಜ್ಯದ ಮೀನುಗಾರಿಕೆ ಇಲಾಖೆಗೆ ಹಂಚಿಕೆಯಾಗುತ್ತಿರುವ ಅನುದಾನವು ಕನಿಷ್ಠ ಮಟ್ಟ ದಲ್ಲಿದ್ದು, ರಾಜ್ಯದಲ್ಲಿ ಮೀನುಗಾರಿಕೆ ಯನ್ನು ಮತ್ತಷ್ಟು ಬಲಪಡಿಸಲು ಕೇಂದ್ರ ಸರ್ಕಾರದಿಂದ ಹೆಚ್ಚಿನ ಅನುದಾನ ಪಡೆಯುವ ಸಂಬಂಧ ಸರ್ಕಾರವು ವಿಶೇಷ ಯೋಜನೆ ಗಳನ್ನು ರೂಪಿಸಲು ಉದ್ದೇಶಿಸಿದೆಯೇ? (ಉದ್ದೇಶಿಸಿದ್ದಲ್ಲಿ, ಅವುಗಳ ವಿವರ ನೀಡುವುದು) | ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ 5 ವರ್ಷಗಳ (2020-25) ಅವಧಿಗೆ ಕೇಂದ್ರ ಸರ್ಕಾರವು ರೂ. 279.00 ಕೋಟಿಗಳ ಕೇಂದ್ರದ ಪಾಲು ನಿಗದಿಪಡಿಸಿರುತ್ತದೆ. 2021-22ನೇ ಆರ್ಥಿಕ ವರ್ಷದಲ್ಲಿ ರೂ.70.00 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. 2021-22ನೇ ಸಾಲಿನಲ್ಲಿ PMMSY ಯೋಜನೆ ಯಡಿಯಲ್ಲಿ ಒಟ್ಟು ರೂ.375.67 ಕೋಟಿಗಳಿಗೆ ಕ್ರಿಯಾ ಯೋಜನೆ ಸಲ್ಲಿಸಿದೆ. ಈ ಪೈಕಿ ರೂ.230.34 ಕೋಟಿಗಳ ಫಲಾನುಭವಿ ಆಧಾರಿತ ಯೋಜನೆಗಳಿಗೆ ವಿವರವಾದ ಯೋಜನಾ ವರದಿಗಳನ್ನು ರಾಜ್ಯದಿಂದ ಸಲ್ಲಿಸಲಾಗಿದೆ. ಸದರಿ ಕ್ರಿಯಾ ಯೋಜನೆಯಡಿ ರೂ.230.09 ಕೋಟಿಗಳಿಗೆ ಕೇಂದ್ರ ಸರ್ಕಾರದ ಅನುಮೋದನೆ ದೊರೆತಿರುತ್ತದೆ. ಇದರಲ್ಲಿ ಕೇಂದ್ರದ ಪಾಲು ರೂ.70.05 ಕೋಟಿಗಳಾಗಿರುತ್ತವೆ. |

-2-

| | | |
|---|---|---|
| | | ರಾಜ್ಯದ ಮೀನುಗಾರರು ಮತ್ತು ಮೀನುಗಾರಿಕೆ ವಲಯವು ಹೆಚ್ಚಿನ ಪ್ರಯೋಜನವನ್ನು ಕೇಂದ್ರ ಸರ್ಕಾರದಿಂದ ಪಡೆಯಲು ಇಲಾಖೆಯು 2022-23ನೇ ಸಾಲಿನ PMMSY ಯೋಜನೆಯಡಿ ಕೇಂದ್ರ ಸರ್ಕಾರಕ್ಕೆ ರೂ.477.85 ಕೋಟಿಗಳಿಗೆ ಕ್ರಿಯಾ ಯೋಜನೆಯನ್ನು ಸಲ್ಲಿಸಿದೆ.<br><br>ಇದಲ್ಲದೆ, ಮೀನುಗಾರಿಕೆ ಬಂದರುಗಳು, ಮೀನು ಇಳಿದಾಣ ಕೇಂದ್ರಗಳು ಮತ್ತು ಜೆಟ್ಟಿಗಳಂತಹ ದೊಡ್ಡ ಮೂಲ ಸೌಕರ್ಯಗಳ ಸೃಜನೆಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ ಮತ್ತು ಅನುಮೋದನೆ ಪಡೆಯಲಾಗಿದೆ.<br><br>ಮುಂದುವರೆಸುತ್ತ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ - ನಬಾರ್ಡ್ ನೆರವಿನ ಅಡಿಯಲ್ಲಿ ಮೂಲ ಸೌಕರ್ಯ ಸೌಲಭ್ಯಗಳನ್ನು ಸಹ ಅಭಿವೃದ್ಧಿಪಡಿಸಲಾಗುತ್ತಿದೆ. ಮೀನುಗಾರಿಕೆ ಬಂದರುಗಳ ಹೂಳೆತ್ತುವಿಕೆ ಮತ್ತು ಮೀನುಗಾರಿಕೆ ಬಂದರುಗಳಲ್ಲಿ ಇತರ ಆಧುನೀಕರಣ ಕಾರ್ಯಗಳ ಪ್ರಸ್ತಾಪವನ್ನು ಮೀನುಗಾರಿಕೆ ಮೂಲಸೌಕರ್ಯ ಅಭಿವೃದ್ಧಿ ನಿಧಿಯಡಿಯಲ್ಲಿ ಸಲ್ಲಿಸಲಾಗಿದೆ. ಮೀನುಗಾರಿಕೆ ಬಂದರುಗಳು ಮತ್ತು ಇಳಿಯುವ ಕೇಂದ್ರಗಳ ಆಧುನೀಕರಣಕ್ಕಾಗಿ ಹಾಗೂ seafood ಪಾರ್ಕ್ ಸ್ಥಾಪನೆಗಾಗಿ ಪ್ರಸ್ತಾವನೆಗಳನ್ನು ಆರ್.ಕೆ.ವಿ.ವೈ.ಗೆ ಸಲ್ಲಿಸಲಾಗಿದೆ ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆ ನಿರೀಕ್ಷಿಸಲಾಗಿದೆ.<br><br>ಆದ್ದರಿಂದ, ವಿವಿಧ ಕೇಂದ್ರ ಸರ್ಕಾರದ ಯೋಜನೆಗಳ ಅಡಿಯಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ಮೀನುಗಾರಿಕೆ ವಲಯವು ಗಮನಾರ್ಹವಾಗಿ ಅಭಿವೃದ್ಧಿ ಹೊಂದಲು ರಾಜ್ಯವು ಎಲ್ಲಾ ಕ್ರಮಗಳನ್ನು ಕೈಗೊಂಡಿದೆ ಮತ್ತು ಭವಿಷ್ಯದಲ್ಲಿ ರಾಜ್ಯಕ್ಕೆ ಕೇಂದ್ರದ ನೆರವಿನ ದೊಡ್ಡ ಪಾಲು ಪಡೆದುಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದಲ್ಲದೆ, ಇತರ ರಾಜ್ಯಗಳೊಂದಿಗೆ ಹೋಲಿಸಿದರೆ ಇಲಾಖೆಯು ಪಡೆಯುವ ಕೇಂದ್ರದ ಆರ್ಥಿಕ ನೆರವಿನಲ್ಲಿ ರಾಜ್ಯವು ಹಿಂದುಳಿದಿಲ್ಲ ಎಂಬುದನ್ನು ಉಲ್ಲೇಖಿಸಬಹುದು. |

ಸಂಖ್ಯೆ: ಪಸಂಮೀ ಇ-78 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1955 ಕ್ಕೆ

### ಅನುಬಂಧ-1

### ಮೀನುಗಾರಿಕೆ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕೇಂದ್ರ ಪುರಸ್ಕೃತ ಯೋಜನೆಗಳ ಸಂಕ್ಷಿಪ್ತ ವಿವರ

1. **ನೀಲಿ ಕ್ರಾಂತಿ/ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆ:** ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಒಳನಾಡು ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಯೋಜನೆಯಡಿ ಮೀನು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು, ಮೀನು ಮಾರಾಟ ಸೌಕರ್ಯಗಳನ್ನು ಒದಗಿಸಲು ಫಲಾನುಭವಿ ಆಧಾರಿತ ವಿವಿಧ ಘಟಕಗಳಿಗೆ ಸಾಮಾನ್ಯ ವರ್ಗದವರಿಗೆ ಶೇ.40 ರಷ್ಟು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಮಹಿಳಾ ವರ್ಗದವರಿಗೆ ಶೇ.60 ರಷ್ಟು ಸಹಾಯಧನ ಒದಗಿಸಲಾಗುತ್ತಿದೆ.
2. **ಮೀನುಗಾರಿಕೆ ಬಂದರುಗಳ ಹೂಳೆತ್ತುವಿಕೆ (ಕೇಂದ್ರ ಪುರಸ್ಕೃತ ಯೋಜನೆ)**

   ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣಗಳಲ್ಲಿ ಮೀನುಗಾರಿಕೆ ದೋಣಿಗಳ ಸುಗಮ ಸಂಚಾರಕ್ಕೆ ಅನುಕೂಲವಾಗಲು ಹೂಳೆತ್ತಲು ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಸರ್ಕಾರವು ಪ್ರತಿಶತ 50 ರಷ್ಟನ್ನು ಯೋಜನಾ ವೆಚ್ಚವನ್ನು ಮತ್ತು ರಾಜ್ಯ ಸರ್ಕಾರವು ಪ್ರತಿಶತ 50 ರಷ್ಟನ್ನು ಯೋಜನಾ ವೆಚ್ಚವನ್ನು ಭರಿಸುತ್ತದೆ. ಕೇಂದ್ರ ಸರ್ಕಾರದಿಂದ ಮಂಜೂರಾದ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗುವುದು.
3. **ಮೀನುಗಾರಿಕೆ ಬಂದರುಗಳ ನಿರ್ಮಾಣ(ಕೇಂದ್ರ ಪುರಸ್ಕೃತ ಯೋಜನೆ)**

   ಮಂಜೂರಾದ ಮೀನುಗಾರಿಕೆ ಬಂದರುಗಳ ಕಾಮಗಾರಿ ಮುಂದುವರಿಕೆಗೆ ಹಾಗೂ ಹೊಸ ಯೋಜನೆಗಳ ಕೈಗೊಳ್ಳಲು ಅವಕಾಶ ಮಾಡಲಾಗಿದೆ. ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರವು ಪ್ರತಿಶತ 50 ರಷ್ಟು ಮತ್ತು ರಾಜ್ಯ ಸರ್ಕಾರವು ಪ್ರತಿಶತ 50 ರಷ್ಟನ್ನು ಭರಿಸುತ್ತದೆ. ಈಗಾಗಲೇ ಮಂಜೂರಾದ ಯೋಜನೆಗಳು 75:25 ಅನುಪಾತದಲ್ಲಿಯೇ ಮುಂದುವರೆಯುತ್ತದೆ.
4. ಮೀನುಗಾರರ ಕಲ್ಯಾಣ ಯೋಜನೆಗಳು(ಕೇಂದ್ರ ಪುರಸ್ಕೃತ ಯೋಜನೆ)

   ಅ. ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ

   ಉಳಿತಾಯ ಹಾಗೂ ಪರಿಹಾರ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/- ಮತ್ತು ರಾಜ್ಯ ಸರ್ಕಾರ ರೂ.1500/- ಸೇರಿಸಿ ಹೀಗೆ ಒಟ್ಟು ರೂ.4500/- ಗಳನ್ನು ಮೀನುಗಾರಿಕೆ ಇಲ್ಲದ 03 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ರೂ.1500/- ರಂತೆ ಪ್ರತಿ ಮೀನುಗಾರರಿಗೆ ನೀಡಲಾಗುವುದು.

   ಆ) **ಸಾಮೂಹಿಕ ವಿಮಾ ಯೋಜನೆ:**

   ರಾಜ್ಯದ ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲು ರಾಜ್ಯದ ವಿಮಾ ಕಂತನ್ನು ಪಾವತಿಸಲು ಅನುದಾನ ಒದಗಿಸಲಾಗಿದೆ. ಈ ಯೋಜನೆಯಡಿ ವಿಮಾ ಸೌಲಭ್ಯವನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.500,000/-ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.100,000/-ಗಳ ಪರಿಹಾರ ನೀಡಲಾಗುವುದು.

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1955 ಕ್ಕೆ

ಅನುಬಂಧ-2

ಕಳೆದ 3 ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಹಾಗೂ ಖರ್ಚಾಗಿರುವ ಅನುದಾನದ ವಿವರ

| ಆರ್ಥಿಕ ಪ್ರಗತಿ (ರೂ.ಲಕ್ಷಗಳಲ್ಲಿ) | | 2018-19 | | | 2019-20 | | | 2020-21 | | |
|---|---|---|---|---|---|---|---|---|---|---|
| ಕ್ರ.ಸಂ | ಯೋಜನೆ/ ಕಾರ್ಯಕ್ರಮ | ಒಟ್ಟು ಬಿಡುಗಡೆ | ಕೇಂದ್ರದ ಪಾಲು | ಒಟ್ಟು ವೆಚ್ಚ | ಒಟ್ಟು ಬಿಡುಗಡೆ | ಕೇಂದ್ರದ ಪಾಲು | ಒಟ್ಟು ವೆಚ್ಚ | ಒಟ್ಟು ಬಿಡುಗಡೆ | ಕೇಂದ್ರದ ಪಾಲು | ಒಟ್ಟು ವೆಚ್ಚ |
| 1 | ನೀಲಿ ಕ್ರಾಂತಿ/ PMMSY ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ | 962.43 | 630.23 | 939.45 | 1520.1 | 898.53 | 1519.88 | 4700.85 | 2820.51 | 4462.72 |
| 2 | ಮೀನುಗಾರರ ಕಲ್ಯಾಣ ಯೋಜನೆಗಳು | 924.46 | 462.23 | 866.68 | 0.00 | 0.00 | 0.00 | 1433.50 | 716.75 | 1433.42 |
| 3 | ಮೀನುಗಾರಿಕೆ ಬಂದರುಗಳ ನಿರ್ಮಾಣ | 7074.92 | 7073.92 | 7074.92 | 4431.26 | 3700 | 4431.26 | 2500.00 | 1073.20 | 2499.68 |
| 4 | ಮೀನುಗಾರಿಕೆ ಬಂದರುಗಳ ಹೂಳೆತ್ತುವಿಕೆ | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 |